ಇಸಿಎಸ್ (ವಿದ್ಯುನ್ಮಾನ ತೀರುವೆ ಸೇವೆ – ಜಮಾ ತೀರುವಳಿ)

ಇಸಿಎಸ್ ಕುರಿತು ಆಗಾಗ ಕೇಳಲಾಗುವ ಪ್ರಶ್ನೆಗಳು

1. ಇಸಿಎಸ್ (ಜಮಾ ತೀರುವಳಿ) ಎಂದರೇನು?

ಇದು ಹಣ ಪಾವತಿಯ ಒಂದು ವಿಧಾನವಾಗಿದ್ದು, ಈ ಮೂಲಕ ಸಂಸ್ಥೆಗಳು ದೊಡ್ಡ ಮೊತ್ತದ ಹಣವನ್ನು (ಅಂದರೆ ಬಡ್ಡಿ/ಲಾಭಾಂಶ) ಷೇರುದಾರರ/ಠೇವಣಿದಾರರ/ಹೂಡಿಕೆದಾರರ ಬ್ಯಾಂಕ್ ಖಾತೆಗಳಿಗೆ ವಿದ್ಯುನ್ಮಾನ ಮಾಧ್ಯಮದ ಮೂಲಕ ನೇರವಾಗಿ ಯಾವುದೇ ಲಿಖಿತ ಪತ್ರಗಳನ್ನು ನೀಡದೆ ಪಾವತಿ ಮಾಡಬಹುದು.

2. ಚಾಲ್ತಿಯಲ್ಲಿರುವ ಪದ್ಧತಿ ಯಾವುದು ಮತ್ತು ಆ ಕುರಿತಂತೆ ಇರುವ ತೊಂದರೆಗಳಾವುವು?

ಬಡ್ಡಿ/ಲಾಭಾಂಶಗಳಂತಹ ದೊಡ್ಡ ಮತ್ತು ಪುನರಾವರ್ತಿತ ಪಾವತಿಗಳಲ್ಲಿ ಅಧಿಪತ್ರಗಳ ಮುದ್ರಣ, (ದುಬಾರಿ ಎಂಐಸಿಆರ್ ನಮೂನೆಯಲ್ಲಿ) ಅವುಗಳನ್ನು ಅಂಚೆ ಮೂಲಕ ರವಾನಿಸುವುದು (ಹೆಚ್ಚಾಗಿ ನೋಂದಾಯಿತ ಅಂಚೆ ಮೂಲಕ) ಮತ್ತು ಏಜೆನ್ಸಿ ಬ್ಯಾಂಕುಗಳಿಂದ ಪಾವತಿಯಾದ ನಂತರ ಲೆಕ್ಕ ಹೊಂದಾಣಿಕೆ ಮುಂತಾಗಿ ಕಾಗದದ ಬಳಕೆಯಿದ್ದು, ಇದರಿಂದಾಗುವ ತೊಂದರೆಗಳೆಂದರೆ:

- ಇಲ್ಲಿ ಮುದ್ರಣ, ರವಾನೆ ಮತ್ತು ಲೆಕ್ಕ ಹೊಂದಾಣಿಕೆಗಾಗಿ ಅಧಿಕ ಖರ್ಚಿನ ಆಡಳಿತ ಯಂತ್ರದ ಅಗತ್ಯವಿರುತ್ತದೆ.
- ತೀರುವಳಿ ಕಾರ್ಯದಲ್ಲಿ ಹೆಚ್ಚಿನ ಸಂಖ್ಯೆಯ ಲಿಖಿತಪತ್ರಗಳ ಬಳಕೆಯ ಪರಿಣಾಮವಾಗಿ ಕಾರ್ಯಾಚರಣೆಯಲ್ಲಿ ಅಡಚಣೆಗಳು ಹಾಗೂ ಚೆಕ್ಕುಗಳಿಗೆ ಸಂಬಂಧಿಸಿದ ಕಾರ್ಯವಿಧಾನದಲ್ಲಿ ಒತ್ತಡಗಳು ಉಂಟಾಗುತ್ತವೆ.
- ಲಿಖಿತಪತ್ರಗಳು ಸಾಗಣೆಯಲ್ಲಿ ಕಳೆದುಹೋಗಬಹುದು ಹಾಗೂ ಅವುಗಳನ್ನು ಬಳಸಿ ಮೋಸದಿಂದ ನಗದನ್ನು ಪಡೆಯುವ ಸಾಧ್ಯತೆಯಿರುತ್ತದೆ.
- ಗ್ರಾಹಕರು ಲಿಖಿತಪತ್ರ ತಲುಪಿರುವ/ತಲುಪದಿರುವ ಬಗ್ಗೆ ಗಮನವಿಟ್ಟು, ಅದು ಕೈ ಸೇರಿದೊಡನೆ ಅದನ್ನು ಬ್ಯಾಂಕಿನಲ್ಲಿ ಠೇವಣಿ ಮಾಡಲು ಪ್ರಯತ್ನಿಸಬೇಕಾಗುವುದು.
- ಅಂತಹ ಹೆಚ್ಚಿನ ಸಂಖ್ಯೆಯ ಲಿಖಿತ ಪತ್ರಗಳ ಪ್ರಕ್ರಿಯೆಯಲ್ಲಿ ತಪ್ಪುಗಳಿಗೆ ಎಡೆಯಾಗುವುದಷ್ಟೇ ಅಲ್ಲ, ಏಕತಾನತೆ ಉಂಟಾಗುತ್ತದೆ ಹಾಗೂ ಚೆಕ್ಕುಗಳ ತೀರುವಳಿ ವ್ಯವಸ್ಥೆಯಲ್ಲಿ ತೊಂದರೆಯಾಗುತ್ತದೆ.

3. ಇಸಿಎಸ್ (ಜಮಾ ತೀರುವಳಿ) ಕಾರ್ಯವಿಧಾನವೇನು?

ಹಂತ–1: ಹೆಚ್ಚಿನ ಸಂಖ್ಯೆಯ ಗ್ರಾಹಕರಿಗೆ/ಹೂಡಿಕೆದಾರರಿಗೆ ಹಣ ಪಾವತಿ ಮಾಡಬೇಕಾದ ಒಂದು ಕಾರ್ಪೊರೇಟ್ ಸಂಸ್ಥೆಯು (ಬಳಕೆದಾರ ಎಂದು ಉಲ್ಲೇಖಿಸಿರುವ) ಮ್ಯಾಗ್ನೆಟಿಕ್ ಮಾಧ್ಯಮದಲ್ಲಿ (ಅಂದರೆ ಟೇಪ್ ಅಥವಾ ಫ್ಲಾಪಿ) ಪಾವತಿ ದತ್ತಾಂಶಗಳನ್ನು ಸಿದ್ಧಪಡಿಸಿ ಅವನ್ನು ತನ್ನ ಬ್ಯಾಂಕರ್‌ಗೆ (ಪ್ರಾಯೋಜಕ್ ಬ್ಯಾಂಕ್) ಸಲ್ಲಿಸುತ್ತದೆ.

ಹಂತ–2: ಪ್ರಾಯೋಜಕ ಬ್ಯಾಂಕು ಸ್ಥಳೀಯ ಬ್ಯಾಂಕರುಗಳ ತೀರುವಳಿ ಮನೆಗೆ (15 ಕೇಂದ್ರಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕು ಮತ್ತು ಇತರ 31 ಕೇಂದ್ರಗಳಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ಅಥವಾ ಸಹವರ್ತಿ ಬ್ಯಾಂಕುಗಳು ನಿರ್ವಹಿಸುವ) ಪಾವತಿ ದತ್ತಾಂಶವನ್ನು ಸಲ್ಲಿಸಿ ಫಲಾನುಭವಿಗಳು ವ್ಯವಹಾರಕ್ಕಾಗಿ ಖಾತೆ ಹೊಂದಿರುವ ಪ್ರಾಯೋಜಕ ಬ್ಯಾಂಕಿನ ಖಾತೆಗೆ ಖರ್ಚು ಹಾಕಲು ಗಮ್ಯ ಬ್ಯಾಂಕಿಗೆ ಜಮೆ ಹಾಕಲು ತೀರುವಳಿ ಕೇಂದ್ರದ ವ್ಯವಸ್ಥಾಪಕನಿಗೆ ಅಧಿಕಾರ ನೀಡುತ್ತದೆ.

ಹಂತ 3: ಈ ಪ್ರಾಧಿಕರಣವನ್ನು ಸ್ವೀಕರಿಸಿದ ತರುವಾಯ ತೀರುವಳಿ ಕೇಂದ್ರದಲ್ಲಿ ದತ್ತಾಂಶಗಳ ಸಹಾಯದಿಂದ ಪರಸ್ಪರ ಬ್ಯಾಂಕುಗಳ ನಿಧಿಗಳ ಇತ್ಯರ್ಥವನ್ನು ಲೆಕ್ಕ ಹಾಕಲಾಗುತ್ತದೆ.

ಹಂತ 4: ತೀರುವಳಿ ಕೇಂದ್ರವು ಗಮ್ಯ ಬ್ಯಾಂಕುಗಳ ಶಾಖಾವಾರು ಸೇವಾ ಶಾಖೆಗಳಿಗೆ ಫಲಾನುಭವಿ ವಿವರಗಳನ್ನು ಅಂದರೆ ಫಲಾನುಭವಿಗಳ ಹೆಸರು, ಅವರು ಖಾತೆ ಹೊಂದಿರುವ ಶಾಖೆಗಳ ಹೆಸರುಗಳು, ಖಾತೆಯ ವಿಧ, ಖಾತೆಯ ಸಂಖ್ಯೆಗಳು ಮತ್ತು ಮೊತ್ತಗಳನ್ನು ತಿಳಿಸಿ ಜಮಾ ವರದಿಗಳನ್ನು ಒದಗಿಸುತ್ತದೆ.

ಹಂತ 5: ಸೇವಾ ಶಾಖೆಗಳು ತಮ್ಮ ಬ್ಯಾಂಕ್‌ನ ಸಂಬಂಧಪಟ್ಟ ಶಾಖೆಗಳಿಗೆ ವಿವರಣಪಟ್ಟಿ ಕಳುಹಿಸಿದಾಗ ಅಲ್ಲಿ ಗೊತ್ತುಪಡಿಸಲಾದ ದಿನಾಂಕದಂದು ಫಲಾನುಭವಿಗಳ ಖಾತೆಗಳಿಗೆ ಜಮೆ ಹಾಕಲಾಗುತ್ತದೆ.

4. ಈ ವ್ಯವಸ್ಥೆ ಕಾರ್ಪೊರೇಟ್ ಸಂಸ್ಥೆಗೆ ಹೇಗೆ ಪ್ರಯೋಜನಕಾರಿಯಾಗಿದೆ?

- ಈಗ ಎಂಐಸಿಆರ್ ಪ್ರಪತ್ರದಲ್ಲಿ ಲಿಖಿತ ಪತ್ರಗಳನ್ನು ಮುದ್ರಿಸಿ, ನೋಂದಾಯಿತ ಅಂಚೆ ಮೂಲಕ ಕಳುಹಿಸುವ ಆಡಳಿತ ವೆಚ್ಚವನ್ನು ಭರಿಸಲಾಗುತ್ತಿದ್ದು, ಅದನ್ನು ಉಳಿತಾಯ ಮಾಡಬಹುದು.
- ಸಾಗಣೆಯಲ್ಲಿ ಲಿಖಿತಪತ್ರಗಳು ಕಳೆದುಹೋಗುವುದನ್ನು ಅಥವಾ ವಂಚನೆಯ ನಗದೀಕರಣವನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡಬಹುದು.
- ವ್ಯವಹಾರಗಳ ಲೆಕ್ಕ ಹೊಂದಾಣಿಕೆ ತನ್ನಿಂದತಾನೇ ಆಗುತ್ತದೆ. ಇಸಿಎಸ್ ಸುತ್ತು ಪೂರ್ಣವಾಗುತ್ತಿದ್ದಂತೆಯೇ ಬಳಕೆದಾರ ಸಂಸ್ಥೆಯು ತನ್ನ ಬ್ಯಾಂಕಿನಿಂದ ಪಾವತಿ ಮಾಡಿದ ದಿನಾಂಕ ಸಹಿತವಾಗಿ ಎಲೆಕ್ಟ್ರಾನಿಕ್ ದತ್ತಾಂಶ ಕಡತವನ್ನು ಹಾಗೂ ಬ್ಯಾಂಕರ್‌ನಿಂದ ದೃಢೀಕರಣವನ್ನು ಪಡೆಯಬಹುದು.
- ಗೊತ್ತುಪಡಿಸಿದ ದಿನಾಂಕದಂದು ಮಾತ್ರ ನಿಧಿಗಳ ವ್ಯವಸ್ಥೆಯನ್ನು ಮಾಡಬೇಕಾಗುವುದರಿಂದ ಹಣಕಾಸಿನ ನಿರ್ವಹಣೆಯು ಸುಲಭವಾಗುತ್ತದೆ.
- ಗ್ರಾಹಕ/ಹೂಡಿಕೆದಾರರಿಗೆ ಉತ್ತಮ ಸೇವೆ ಖಚಿತವಾಗಿ ಒದಗಿಸಬಹುದು.
- ಪ್ರಪಂಚದ ಉತ್ತಮ ಕಂಪನಿಗಳು ತಮ್ಮ ಷೇರುದಾರರು/ಹೂಡಿಕೆದಾರರು, ಗ್ರಾಹಕರಿಗೆ ಪಾವತಿಸುವ ರೀತಿಯಲ್ಲಿ ಪಾವತಿಸಬಹುದು.

5. ಈ ಕಾರ್ಯಯೋಜನೆಯು ಫಲಾನುಭವಿ ಗ್ರಾಹಕನಿಗೆ ಹೇಗೆ ಲಾಭದಾಯಕವಾಗುತ್ತದೆ?

- ಗೊತ್ತುಪಡಿಸಿದ ದಿನಾಂಕದಂದು ಪಾವತಿಯಾಗುತ್ತದೆ
- ಶ್ರಮವಿಲ್ಲದೆ ಸ್ವೀಕೃತಿ – ಲಾಭಾಂಶ/ಬಡ್ಡಿ ಠೇವಣಿ ಇಡಲು ಬ್ಯಾಂಕಿಗೆ ಹೋಗಬೇಕಾದ ಅಗತ್ಯವಿರುವುದಿಲ್ಲ
- ಸಾಗಣೆಯಲ್ಲಿ ಲಿಖಿತಪತ್ರ ಕಳೆದುಹೋಗುವುದು ಅಥವಾ ಅದರಿಂದ ಮೋಸದಿಂದ ಆಗುವ ನಗದೀಕರಣ ಮತ್ತು ತತ್ಫಲವಾಗಿ ಕಂಪನಿಯೊಡನೆ ಪತ್ರ ವ್ಯವಹಾರ ಎಲ್ಲವನ್ನೂ ಸಂಪೂರ್ಣವಾಗಿ ತಡೆಯಬಹುದು.

6. ಇಸಿಎಸ್ ಮೂಲಕ ಯಾರಿಂದ ಮತ್ತು ಯಾವಾಗ ಹಣ ಸಂದಾಯವಾಗಿದೆ ಎಂಬುದು ಹೂಡಿಕೆದಾರ/ಗ್ರಾಹಕನಿಗೆ ತಿಳಿಯಬೇಕು?

"ಬಳಕೆದಾರ" ಸಂಸ್ಥೆಯು ಮೊತ್ತ ಹಾಗೂ ಪಾವತಿ ಮಾಡಬೇಕಾದ ದಿನಾಂಕವನ್ನು ಹೂಡಿಕೆದಾರ/ಗ್ರಾಹಕರಿಗೆ ತಿಳಿಸುವ ಹೊಣೆ ಹೊಂದಿರುತ್ತದೆ. ಹೂಡಿಕೆದಾರ/ಗ್ರಾಹಕನ ಖಾತೆಗೆ ಹಣ ಜಮಾ ಮಾಡಿದ ತರುವಾಯ ಗಮ್ಯ ಬ್ಯಾಂಕ್

ಶಾಖೆಯು ಖಾತೆಯ ವಿವರಪಟ್ಟಿ/ಪಾಸ್ ಪುಸ್ತಕದಲ್ಲಿ ಜಮೆಯ ಮೂಲವನ್ನು ಸೂಚಿಸುತ್ತದೆ. (ಉದಾ: ಇಸಿಎಸ್–ಯುಟಿಐ; ಇಸಿಎಸ್–ಟಾಟಾ ಫೈನಾನ್ಸ್; ಇಸಿಎಸ್–ಐಸಿಐಸಿಐ; ಇತ್ಯಾದಿ)

7. ಎಷ್ಟು ಕೇಂದ್ರಗಳಲ್ಲಿ ಈ ಸೇವೆಯು ಲಭ್ಯವಾಗುತ್ತಿದೆ?

ಪ್ರಸ್ತುತದಲ್ಲಿ ಈ ಸೇವೆಯು ಲಭ್ಯವಾಗುತ್ತಿರುವ ಕೇಂದ್ರಗಳೆಂದರೆ:

ಕ್ರಮ ಸಂ.	ಕೇಂದ್ರದ ಹೆಸರು	ಕ್ರಮ ಸಂ.	ಕೇಂದ್ರದ ಹೆಸರು	ಷರಾ
ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ನಿರ್ವಹಣೆ*		**ಭಾರತೀಯ ಸ್ಟೇಟ್ ಬ್ಯಾಂಕ್‌ನಿಂದ ನಿರ್ವಹಣೆ**		
1.	ಅಹಮದಾಬಾದ್	1.	ಬರೋಡಾ	
2.	ಬೆಂಗಳೂರು	2.	ಡೆಹ್ರಾಡೂನ್	
3.	ಭುವನೇಶ್ವರ	3.	ನಾಸಿಕ್	
4.	ಕೋಲ್ಕತ್ತಾ	4.	ಪಣಜಿ	
5.	ಚಂಡೀಗಢ್	5.	ಸೂರತ್	
6.	ಚೆನ್ನೈ	6.	ತಿರುಚಿ	
7.	ಗುವಾಹತಿ	7.	ತ್ರಿಚೂರ್	
8.	ಹೈದರಾಬಾದ್		**ಸ್ಟೇಟ್ ಬ್ಯಾಂಕ್ ಆಫ್ ಇಂದೋರ್‌ನಿಂದ ನಿರ್ವಹಣೆ**	
9.	ಜೈಪುರ	1.	ಇಂದೋರ್	
10.	ಕಾನ್‌ಪುರ		**ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಿಂದ ನಿರ್ವಹಣೆ**	
11.	ಮುಂಬೈ	1.	ಪುಣೆ	
12.	ನಾಗಪುರ	2.	ಸೇಲಂ	
13.	ನವ ದೆಹಲಿ		**ಆಂಧ್ರಾ ಬ್ಯಾಂಕ್‌ನಿಂದ ನಿರ್ವಹಣೆ**	
14.	ಪಾಟ್ನಾ	1.	ವಿಶಾಖಾಪಟ್ಟಣ	
15.	ತಿರು'ಪುರಂ		**ಕಾರ್ಪೋರೇಷನ್ ಬ್ಯಾಂಕ್‌ನಿಂದ ನಿರ್ವಹಣೆ**	
	ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ ನಿರ್ವಹಣೆ	1.	ಮಂಗಳೂರು	
1.	ಆಗ್ರಾ		**ಬ್ಯಾಂಕ್ ಆಫ್ ಬರೋಡಾದಿಂದ ನಿರ್ವಹಣೆ**	
2.	ಅಲಹಾಬಾದ್	1.	ಕೊಯಂಬತ್ತೂರು	
3.	ಜಲಂಧರ್	2.	ರಾಜ್‌ಕೋಟ್	
4.	ಲಕ್ನೋ			

5.	ಲೂಧಿಯಾನ		**ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದಿಂದ ನಿರ್ವಹಣೆ**	
6.	ವಾರಣಾಸಿ	1.	ಭೋಪಾಲ್	
7.	ಕೊಲ್ಹಾಪುರ		**ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್‌ನಿಂದ ನಿರ್ವಹಣೆ**	
8.	ಔರಂಗಾಬಾದ್	1.	ಅಮೃತ್‌ಸರ್	
9.	ಮೈಸೂರು			
10.	ಈರೋಡು			
	ಸ್ಟೇಟ್ ಬ್ಯಾಂಕ್ ಆಫ್ ತಿರುವಾಂಕೂರುನಿಂದ ನಿರ್ವಹಣೆ			
1.	ಕೊಚ್ಚಿನ್/ಎರ್ನಾಕುಲಂ			
	ಕೆನರಾ ಬ್ಯಾಂಕ್‌ನಿಂದ ನಿರ್ವಹಣೆ			
1.	ಮಧುರೈ			

8. ಈ ಕಾರ್ಯಯೋಜನೆಯಿಂದ ಯಾವ ಪ್ರಕಾರದ ಕಾರ್ಪೊರೇಟ್ ಸಂಸ್ಥೆಗಳು ಹೆಚ್ಚು ಪ್ರಯೋಜನ ಪಡೆಯುತ್ತಿವೆ?

ಹೂಡಿಕೆದಾರ/ಫಲಾನುಭವಿಗಳ ನಿಗದಿತ ಗುಂಪಿಗೆ ನಿಯತ ಅವಧಿಯ ದೊಡ್ಡ ಮೊತ್ತದ ಪಾವತಿಗಳನ್ನು ಮಾಡುವ ಕಾರ್ಪೊರೇಟ್ ಸಂಸ್ಥೆಗಳು.

9. ದೊಡ್ಡ ಪರಿಮಾಣ ಎಂಬುದರ ಅರ್ಥವೇನು? ವ್ಯವಹಾರಗಳ ಸಂಖ್ಯೆಯಲ್ಲಿ ಯಾವುದೇ ಕನಿಷ್ಠ ಮಿತಿ ಇದೆಯೇ?

ವ್ಯವಹಾರಗಳ ಕನಿಷ್ಠ ಸಂಖ್ಯೆಯನ್ನು ನಿರ್ದಿಷ್ಟಪಡಿಸಿರುವುದಿಲ್ಲ.

10. ವೈಯಕ್ತಿಕ ವ್ಯವಹಾರಗಳ ಮೊತ್ತಕ್ಕೆ ಮಿತಿ ವಿಧಿಸಲಾಗಿದೆಯೇ?

ವೈಯಕ್ತಿಕ ವ್ಯವಹಾರಗಳ ಮೊತ್ತಕ್ಕೆ ಮೌಲ್ಯಮಿತಿ ಇರುವುದಿಲ್ಲ.

11. ಹತ್ತು ಕೇಂದ್ರಗಳಿಗೆ ಪಾವತಿ ಮಾಡಬೇಕಾದ ಒಂದು ಕಂಪನಿಯು ಪ್ರತ್ಯೇಕವಾಗಿ ಹತ್ತು ಕೇಂದ್ರಗಳಲ್ಲಿ ತೀರುವಳಿ ಕೇಂದ್ರಗಳಿಗೆ ಸಲ್ಲಿಸುವುದು ಅವಶ್ಯವೇ?

ಒಂದು ಕಂಪನಿಯು ಇಸಿಎಸ್ (ಜಮೆ) ಸೌಲಭ್ಯ ಹೊಂದಿರುವ ವಿವಿಧ ಕೇಂದ್ರಗಳಿಗೆ ಮಾಡಬೇಕಾದ ಪಾವತಿಗಾಗಿ ಒಂದೇ ಕೇಂದ್ರದಲ್ಲಿ ಸಲ್ಲಿಸಬಹುದು.

12. ಪ್ರಕ್ರಿಯಾ ಸೇವಾ ಶುಲ್ಕ ಎಷ್ಟು? ಇದು ದುಬಾರಿ ಸೇವೆಯೇ?

ಆರ್‌ಬಿಐ ಮಾರ್ಚ್ 31, 2007ರ ವರೆಗೆ ಪ್ರಕ್ರಿಯಾ ಶುಲ್ಕಗಳಿಗೆ ವಿನಾಯತಿ ನೀಡಿದೆ. ಬ್ಯಾಂಕುಗಳು ತಮ್ಮ ಆಂತರಿಕ ಕಾರ್ಯನೀತಿಗಳಿಗೆ ಅನುಗುಣವಾಗಿ ಸೇವಾ ಶುಲ್ಕಗಳನ್ನು ವಿಧಿಸುತ್ತಿವೆ.

13. ಹೂಡಿಕೆದಾರ/ಗ್ರಾಹಕ ಗಮ್ಯ ಬ್ಯಾಂಕ್/ಶಾಖೆಗೆ ಯಾವುದೇ ಸೇವಾ ಶುಲ್ಕವನ್ನು ಪಾವತಿಸುವ ಅಗತ್ಯವಿದೆಯೇ?

ಗಮ್ಯ ಬ್ಯಾಂಕ್/ಶಾಖೆಯು ಹೂಡಿಕೆದಾರ/ಗ್ರಾಹಕನ ಖಾತೆಗೆ ಜಮಾ ಮಾಡುವುದಕ್ಕೆ ಶುಲ್ಕಗಳನ್ನು ವಿಧಿಸುವುದಿಲ್ಲ.

14. ಕಾರ್ಪೊರೇಟ್ ಸಂಸ್ಥೆಗಳು ಹೂಡಿಕೆದಾರರಿಂದ ಆದೇಶವನ್ನು ಪಡೆಯಬೇಕಾದ ಅಗತ್ಯವಿದೆಯೇ?

ಹೌದು. ಈ ಉದ್ದೇಶಕ್ಕಾಗಿ ಒಂದು ಮಾದರಿ ಆದೇಶ ನಮೂನೆಯನ್ನು ಗೊತ್ತುಪಡಿಸಲಾಗಿದೆ. ಇದೊಂದು ದೊಡ್ಡ ಕೆಲಸವೆಂದೇ ಹೇಳಬಹುದು; ಆದರೆ ಒಮ್ಮೆ ದತ್ತಾಂಶಗಳನ್ನು (ಮಾಹಿತಿ ಆಧಾರಾಂಶಗಳನ್ನು) ಸಿದ್ಧಪಡಿಸಿದರೆ, ತರುವಾಯದ ಪಾವತಿಯ ಕಾರ್ಯವಿಧಾನವು ಸುಲಭವಾಗುತ್ತದೆ. ಎಸ್ಇಬಿಐ ಮಾರ್ಗದರ್ಶನ ಸೂತ್ರಗಳ ಮೇರೆಗೆ ಹೂಡಿಕೆದಾರರು ಬಡ್ಡಿ/ಲಾಭಾಂಶ ಅಧಿಪತ್ರಗಳ ಮೇಲೆ ಮುದ್ರಿಸಲು, ತಮ್ಮ ಷೇರು ಅರ್ಜಿಗಳಲ್ಲಿ ತಮ್ಮ ಖಾತಾ ಸಂಖ್ಯೆಗಳನ್ನು ಕೊಡುತ್ತ ಬಂದಿರುವುದನ್ನು ಪರಿಗಣಿಸಿದಾಗ, ಖಾತೆಯ ವಿವರಗಳನ್ನು ಮತ್ತು ಆದೇಶಗಳನ್ನು ಪಡೆಯುವುದು ಹೆಚ್ಚು ಸಮಸ್ಯೆಯನ್ನೊಡ್ಡುವುದಿಲ್ಲ.

15. ಒಂದು ಕಾರ್ಪೊರೇಟ್ ಸಂಸ್ಥೆಯು ಯಾವಾಗ ಮತ್ತು ಹೇಗೆ ಇಸಿಎಸ್ (ಜಮೆ ತೀರುವಳಿ) ಸೌಲಭ್ಯದ ಬಳಕೆಯನ್ನು ಪ್ರಾರಂಭಿಸಬಹುದು?

ಒಂದು ಕಾರ್ಪೊರೇಟ್ ಸಂಸ್ಥೆಯು ಒಂದು ವರ್ಷದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪುನಃ ಪುನಃ ಹಣ ಪಾವತಿ ಮಾಡಬೇಕಾದಲ್ಲಿ ಮತ್ತು ಅದರ ಬಹುಪಾಲು ಫಲಾನುಭವಿಗಳು ಭಾರತದ ಪ್ರಮುಖ ನಗರಗಳಲ್ಲಿ ನೆಲೆಸಿದ್ದಲ್ಲಿ ಅದು ಇಸಿಎಸ್ ಸಂಪರ್ಕ ಪಡೆಯಲು ಉತ್ತಮ ಕಾಲವಾಗಿರುತ್ತದೆ.

ವಿ.ತೀ.ಸೇ.(ಇ.ಸಿ.ಎಸ್) ಜಮೆ ಅಡಿಯಲ್ಲಿನ ಬಳಕೆದಾರ ಸಂಸ್ಥೆಗಳ ಪಟ್ಟಿ

ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು

1. ಬ್ಯಾಂಕ್ ಆಫ್ ಬರೋಡಾ
2. ಬ್ಯಾಂಕ್ ಆಫ್ ಇಂಡಿಯಾ
3. ಬ್ಯಾಂಕ್ ಆಫ್ ಮಧುರಾ ಲಿ.
4. ಸಿಟಿ ಬ್ಯಾಂಕ್
5. ಕಾರ್ಪೊರೇಷನ್ ಬ್ಯಾಂಕ್
6. ದೇನಾ ಬ್ಯಾಂಕ್
7. ಡೆವಲಪ್‌ಮೆಂಟ್ ಕ್ರೆಡಿಟ್ ಬ್ಯಾಂಕ್ ಲಿಮಿಟೆಡ್
8. ಗ್ಲೋಬಲ್ ಟ್ರಸ್ಟ್ ಬ್ಯಾಂಕ್ ಲಿಮಿಟೆಡ್
9. ಗ್ರೇಟರ್ ಬಾಂಬೆ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
10. ಹೆಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್
11. ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಹೆಚ್‌ಯುಡಿಸಿಓ)
12. ಹೌಸಿಂಗ್ ಡೆವಲಪ್‌ಮೆಂಟ್ ಅಂಡ್ ಫೈನಾನ್ಸ್ ಕಾರ್ಪೊರೇಷನ್ (ಹೆಚ್‌ಡಿಎಫ್‌ಸಿ)
13. ಐಸಿಐಸಿಐ ಲಿಮಿಟೆಡ್
14. ಇಂಡಿಯನ್ ಓವರ್‌ಸೀಸ್ ಬ್ಯಾಂಕ್
15. ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ
16. ಕಾಲುಪುರ್ ಕಮರ್ಷಿಯಲ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್
17. ಲೈಫ್ ಇನ್ಸೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

18. ನಾರ್ತ್ ಕೆನರಾ ಜಿಎಸ್‌ಬಿ ಕೋ–ಆಪ್ ಬ್ಯಾಂಕ್ ಲಿಮಿಟೆಡ್
19. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ
20. ಸಾರಸ್ವತ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
21. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
22. ಸ್ಟೇಟ್ ಬ್ಯಾಂಕ್ ಆಫ್ ಟ್ರಾವೆಂಕೂರ್
23. ತಮಿಳುನಾಡು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್
24. ತಮಿಳುನಾಡು ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಫೈನಾನ್ಸ್ ಕಾರ್ಪೊರೇಷನ್
25. ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ
26. ಯುನೈಟೆಡ್ ವೆಸ್ಟರ್ನ್ ಬ್ಯಾಂಕ್ ಲಿಮಿಟೆಡ್
27. ಯುಟಿಐ ಬ್ಯಾಂಕ್ ಲಿಮಿಟೆಡ್

ಬ್ಯಾಂಕಿಂಗ್‌ಯೇತರ ಹಣಕಾಸು ಸಂಸ್ಥೆಗಳು

1. ಅಲಯನ್ಸ್ ಕ್ಯಾಪಿಟಲ್ ಮ್ಯೂಚುವಲ್ ಫಂಡ್ ಲಿಮಿಟೆಡ್
2. ಆಪಲ್ ಕ್ರೆಡಿಟ್ ಕಾರ್ಪೊರೇಷನ್ ಲಿಮಿಟೆಡ್
3. ಅಶೋಕ್ ಲೇಲ್ಯಾಂಡ್ ಫೈನಾನ್ಸ್ ಲಿಮಿಟೆಡ್
4. ಬಿರ್ಲಾ ಕ್ಯಾಪಿಟಲ್ ಇಂಟಲ್. ಎಎಂಸಿ ಲಿಮಿಟೆಡ್
5. ಬಿರ್ಲಾ ಸೆಂಚ್ಯುರಿ ಫೈನಾನ್ಸ್ ಲಿಮಿಟೆಡ್
6. ಬಿರ್ಲಾ ಗ್ಲೋಬಲ್ ಫೈನಾನ್ಸ್ ಲಿಮಿಟೆಡ್
7. ಚೋಳಮಂಡಲಂ ಇನ್ವೆಸ್ಟ್‌ಮೆಂಟ್ ಅಂಡ್ ಫೈನಾನ್ಸ್ ಕಂಪನಿ ಲಿಮಿಟೆಡ್
8. ಸಿಆರ್‌ಬಿ ಟ್ರಸ್ಟೀ ಲಿಮಿಟೆಡ್ – ಅಕೌಂಟ್ ಸಿಆರ್‌ಬಿ ಮ್ಯೂಚುವಲ್ ಫಂಡ್
9. ಡಿಸಿಎಂ ಫೈನಾನ್ಸ್ ಲಿಮಿಟೆಡ್
10. ದಂಡೀ ಇನ್ವೆಸ್ಟ್‌ಮೆಂಟ್ ಮ್ಯಾನೇಜ್‌ಮೆಂಟ್ ಅಂಡ್ ರಿಸರ್ಚ್ ಪ್ರೈವೇಟ್ ಲಿಮಿಟೆಡ್
11. ಎಗ್‌ಮೋರ್ ಬೆನಿಫಿಟ್ ಸೊಸೈಟಿ
12. ಫಿಡೆಲಿಟಿ ಫೈನಾನ್ಸ್ ಲಿಮಿಟೆಡ್
13. ಫಸ್ಟ್ ಲೀಸಿಂಗ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್
14. ಹರಿತಾ ಫೈನಾನ್ಸ್ ಲಿಮಿಟೆಡ್
15. ಇಂಡಿಯಾ ಎಕ್ವಿಪ್‌ಮೆಂಟ್ ಲೀಸಿಂಗ್ ಕಂಪನಿ ಲಿಮಿಟೆಡ್
16. ಇನ್ಫ್ರಾಸ್ಟ್ರಕ್ಚರ್ ಲೀಸಿಂಗ್ ಅಂಡ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್
17. ಇಂಟಗ್ರೇಟೆಡ್ ಫೈನಾನ್ಸ್ ಕಂಪನಿ ಲಿಮಿಟೆಡ್
18. ಇನ್‌ವೆಸ್ಟ್‌ಮೆಂಟ್ ಟ್ರಸ್ಟ್ ಆಫ್ ಇಂಡಿಯಾ ಲಿಮಿಟೆಡ್
19. ಕೋಟಕ್ ಮಹಿಂದ್ರಾ ಫೈನಾನ್ಸ್ ಲಿಮಿಟೆಡ್
20. ಲಕ್ಷ್ಮೀ ಜನರಲ್ ಫೈನಾನ್ಸ್ ಲಿಮಿಟೆಡ್
21. ಎಂ.ಪಿ.ಹೆಚ್.ಎಲ್.ಎಸ್. ನಿಧಿ ಲಿಮಿಟೆಡ್
22. ಮುತ್ಯಾಲಪೇಟ್ ಬೆನಿಫಿಟ್ ಲಿಮಿಟೆಡ್
23. ಪಾರ್ಕ್ ಟೌನ್ ಬೆನಿಫಿಟ್ ಫಂಡ್ ಲಿಮಿಟೆಡ್
24. ಪುರುಸವಾಕುಂ ಪರ್ಮನೆಂಟ್ ಫಂಡ್ ಲಿಮಿಟೆಡ್
25. ಪುರಸಾವಾಲ್ಕಂ ಸಂತತ ಸಂಘ ನಿಧಿ ಲಿಮಿಟೆಡ್
26. ಆರ್ ಬಿ ಎಫ್ ನಿಧಿ ಲಿಮಿಟೆಡ್

27. ಸಕ್ತಿ ಫೈನಾನ್ಸ್ ಲಿಮಿಟೆಡ್
28. ಎಸ್ ಬಿ ಐ ಫಂಡ್ಸ್ ಮ್ಯಾನೇಜ್‌ಮೆಂಟ್ ಲಿಮಿಟೆಡ್
29. ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿಮಿಟೆಡ್
30. ಶ್ರೀರಾಮ್ ಇನ್‌ವೆಸ್ಟ್‌ಮೆಂಟ್ಸ್ ಲಿಮಿಟೆಡ್
31. ಶ್ರೀ ರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಲಿಮಿಟೆಡ್
32. ಸುಂದರಮ್ ಫೈನಾನ್ಸ್ ಲಿಮಿಟೆಡ್
33. ಟಾಟಾ ಫೈನಾನ್ಸ್ ಲಿಮಿಟೆಡ್
34. ಟೆಂಪಲ್‌ಟನ್ ಮ್ಯೂಚುವಲ್ ಫಂಡ್ ಲಿಮಿಟೆಡ್
35. ಟಿವಿಎಸ್ ಲಕ್ಷ್ಮೀ ಕ್ರೆಡಿಟ್ ಲಿಮಿಟೆಡ್

ಕಾರ್ಪೊರೇಟ್ ಸಂಸ್ಥೆಗಳು

1. ಏರ್ ಇಂಡಿಯಾ ಫೈನಾನ್ಸ್ ಅಂಡ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್
2. ಎಕೆಝುಡ್‌ಓ ನೋಬಲ್ ಕೋಟಿಂಗ್ಸ್ ಇಂಡಿಯಾ ಲಿಮಿಟೆಡ್
3. ಅಲಂಕಿತ್ ಅಸೈನ್‌ಮೆಂಟ್ಸ್ ಲಿಮಿಟೆಡ್
4. ಆಮ್‌ವೇ ಇಂಡಿಯಾ ಎಂಟರ್‌ಪ್ರೈಸಸ್
5. ಆಂಧ್ರ ವ್ಯಾಲಿ ಪವರ್ ಸಪ್ಲೈ ಕಂಪನಿ ಲಿಮಿಟೆಡ್
6. ಅಶೋಕ್ ಲೇಲ್ಯಾಂಡ್ ಲಿಮಿಟೆಡ್
7. ಅಸೋಸಿಯೇಟೆಡ್ ಸಿಮೆಂಟ್ ಕಂಪನಿ ಲಿಮಿಟೆಡ್
8. ಬಾಲ್‌ಮೆರ್ ಲಾರಿ ಅಂಡ್ ಕಂಪನಿ ಲಿಮಿಟೆಡ್
9. ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್
10. ಬಾಂಬೆ ಬರ್ಮಾ ಟ್ರೇಡಿಂಗ್ ಕಾರ್ಪೊರೇಷನ್ ಲಿಮಿಟೆಡ್
11. ಬ್ರೇಕ್ಸ್ ಇಂಡಿಯಾ ಲಿಮಿಟೆಡ್
12. ಬಿಎಸ್‌ಇಎಸ್ ಲಿಮಿಟೆಡ್
13. ಕ್ಯಾಡ್‌ಬರಿ ಇಂಡಿಯಾ ಲಿಮಿಟೆಡ್
14. ಕೇಯರ್ನ್ ಎನರ್ಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್
15. ಸೆಂಚ್ಯುರಿ ಟೆಕ್ಸ್‌ಟೈಲ್ಸ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್
16. ಕ್ಲಾರಿಯಂಟ್ (ಇಂಡಿಯಾ) ಲಿಮಿಟೆಡ್
17. ಈಸ್ಟ್ ಇಂಡಿಯಾ ಹೋಟೆಲ್ಸ್ ಲಿಮಿಟೆಡ್
18. ಎಸ್ಸೆಲ್ ಪ್ಯಾಕೇಜಿಂಗ್ ಲಿಮಿಟೆಡ್
19. ಇಐಡಿ ಪ್ಯಾರಿ (ಇಂಡಿಯಾ) ಲಿಮಿಟೆಡ್
20. ಎಸ್ಕಾರ್ಟ್ಸ್ ಲಿಮಿಟೆಡ್
21. ಫೋರ್ಡ್ ಇಂಡಿಯಾ ಲಿಮಿಟೆಡ್
22. ಗ್ಲೋಬಲ್ ಟೆಲಿ–ಸಿಸ್ಟಮ್ಸ್ ಲಿಮಿಟೆಡ್
23. ಗುಡ್‌ರಿಕ್ ಗ್ರೂಪ್ ಲಿಮಿಟೆಡ್
24. ಗ್ರೇಟ್ ಈಸ್ಟರ್ನ್ ಶಿಪ್ಪಿಂಗ್ ಕಂಪನಿ ಲಿಮಿಟೆಡ್
25. ಹಿಂಡಾಲ್ಕೋ ಇಂಡಸ್ಟ್ರೀಸ್ ಲಿಮಿಟೆಡ್
26. ಹಿಂದೂಸ್ಥಾನ್ ಲೀವರ್ ಲಿಮಿಟೆಡ್
27. ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್
28. ಹೋಟೆಲ್ ಲೀಲಾ ವೆಂಚರ್ ಲಿಮಿಟೆಡ್
29. ಐಟಿಸಿ ಲಿಮಿಟೆಡ್
30. ಐಸಿಐ ಇಂಡಿಯಾ ಲಿಮಿಟೆಡ್
31. ಐಡಿಎಲ್ ಇಂಡಸ್ಟ್ರೀಸ್ ಲಿಮಿಟೆಡ್
32. ಇಂಡಿಯನ್ ಏರ್‌ಲೈನ್ಸ್

33. ಇಂಡಿಯನ್ ಹೋಟೆಲ್ಸ್ ಕಂಪನಿ ಲಿಮಿಟೆಡ್
34. ಇಂಡೋ–ಗಲ್ಫ್ ಫರ್ಟಿಲೈಸರ್ ಅಂಡ್ ಕೆಮಿಕಲ್ಸ್ ಕಾರ್ಪೊರೇಷನ್ ಲಿಮಿಟೆಡ್
35. ಇನ್ಫೋಸಿಸ್ ಟೆಕ್ನಾಲಜೀಸ್ ಲಿಮಿಟೆಡ್
36. ಇಂಗರ್‌ಸೋಲ್ ರ್‍ಯಾಂಡ್ ಲಿಮಿಟೆಡ್
37. ಐಟಿಸಿ ಭದ್ರಾಚಲಂ ಪೇಪರ್‌ಬೋರ್ಡ್ಸ್ ಲಿಮಿಟೆಡ್
38. ಜೆಬಿ ಕೆಮಿಕಲ್ಸ್ ಅಂಡ್ ಫಾರ್ಮಾ ಲಿಮಿಟೆಡ್
39. ಜೆಕೆ ಕಾರ್ಪೊರೇಷನ್ ಲಿಮಿಟೆಡ್
40. ಜೆಟಿಎಸ್ ಟೆಕ್ನಾಲಜಿ ಲಿಮಿಟೆಡ್
41. ಕರ್ನಾಟಕ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್
42. ಕೇಸೋರಾಮ್ ಇಂಡಸ್ಟ್ರೀಸ್ ಲಿಮಿಟೆಡ್
43. ಕ್ನಾಲ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್
44. ಕೊಂಕಣ್ ರೇಲ್ವೇ ಕಾರ್ಪೊರೇಷನ್
45. ಕೆಎಸ್‌ಬಿ ಪಂಪ್ಸ್ ಲಿಮಿಟೆಡ್
46. ಎಲ್ ಅಂಡ್ ಟಿ ಕೊಮಾಟ್ಸು ಲಿಮಿಟೆಡ್
47. ಲಾರ್ಸನ್ ಅಂಡ್ ಟೂಬ್ರೋ ಲಿಮಿಟೆಡ್
48. ಮಂಗಳೂರು ರಿಫೈನರೀಸ್ ಅಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್
49. ಮ್ಯಾಕ್ ಡೋವೆಲ್ ಅಂಡ್ ಕಂಪನಿ ಲಿಮಿಟೆಡ್
50. ಮೋಟಾರ್ ಇಂಡಸ್ಟ್ರೀಸ್ ಕಂಪನಿ ಲಿಮಿಟೆಡ್ (ಎಂಐಸಿಓ)
51. ಎನ್ ಐ ಐ ಟಿ ಲಿಮಿಟೆಡ್
52. ನಾಗಾರ್ಜುನ ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್ ಲಿಮಿಟೆಡ್
53. ನವನೀತ್ ಪಬ್ಲಿಕೇಷನ್ಸ್ (ಐ) ಲಿಮಿಟೆಡ್)
54. ನ್ಯೂಸ್ ಟೆಲಿ. ಇಂಡಿಯಾ ಲಿಮಿಟೆಡ್
55. ನೊವಾರ್ಟಿಸ್ ಇಂಡಿಯಾ ಲಿಮಿಟೆಡ್
56. ಆರ್ಕಿಡ್ ಕೆಮಿಕಲ್ಸ್ ಅಂಡ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್
57. ಪಾರ್ಕೆ ಡಾವಿಸ್ ಇಂಡಿಯಾ ಲಿಮಿಟೆಡ್
58. ಪೊನ್ನಿ ಶುಗರ್ಸ್ ಅಂಡ್ ಕೆಮಿಕಲ್ಸ್ ಲಿಮಿಟೆಡ್
59. ಪ್ರಾಕ್ಟರ್ ಅಂಡ್ ಗ್ಯಾಂಬಲ್ ಇಂಡಿಯಾ ಲಿಮಿಟೆಡ್
60. ರೇಮಂಡ್ಸ್ ಲಿಮಿಟೆಡ್
61. ರಿಲೈಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್
62. ಸತ್ಯಂ ಕಂಪ್ಯೂಟರ್ ಸರ್ವಿಸಸ್ ಲಿಮಿಟೆಡ್
63. ಸೀಮೆನ್ಸ್ (ಇಂಡಿಯಾ) ಲಿಮಿಟೆಡ್
64. ಸಿಂಪ್ಸನ್ ಅಂಡ್ ಕಂಪನಿ ಲಿಮಿಟೆಡ್
65. ಸೊನಾಟ ಸಾಫ್ಟ್‌ವೇರ್ ಲಿಮಿಟೆಡ್
66. ಸ್ಪರ್ಲೈಟ್ ಇಂಡಸ್ಟ್ರೀಸ್ ಲಿಮಿಟೆಡ್
67. ಸುಪ್ರೀಮ್ ಇಂಡಸ್ಟ್ರೀಸ್ ಲಿಮಿಟೆಡ್
68. ತಮಿಳುನಾಡು ಪೆಟ್ರೋ ಪ್ರಾಡಕ್ಟ್ಸ್ ಲಿಮಿಟೆಡ್
69. ಟಾಟಾ ಕೆಮಿಕಲ್ಸ್ ಲಿಮಿಟೆಡ್
70. ಟಾಟಾ ಇಂಜಿನಿಯರಿಂಗ್ ಅಂಡ್ ಲೋಕೋಮೋಟಿವ್ ಕಂಪನಿ ಲಿಮಿಟೆಡ್ (ಟಿಇಎಲ್‌ಸಿಓ)
71. ಟಾಟಾ ಹೈಡ್ರೋ ಎಲೆಕ್ಟ್ರಿಕ್ ಪವರ್ ಸಪ್ಲೈ ಕಂಪನಿ ಲಿಮಿಟೆಡ್
72. ಟಾಟಾ ಐರನ್ ಅಂಡ್ ಸ್ಟೀಲ್ ಕಂಪನಿ ಲಿಮಿಟೆಡ್ (ಟಿ ಐ ಎಸ್ ಸಿ ಓ)

73. ಟಾಟಾ ಪವರ್ ಕಂಪನಿ ಲಿಮಿಟೆಡ್
74. ಟಾಟಾ ಟೀ ಲಿಮಿಟೆಡ್
75. ದಿ ಹಿಂದೂ ಲಿಮಿಟೆಡ್
76. ಟ್ಯೂಬ್ ಇನ್‌ವೆಸ್ಟ್‌ಮೆಂಟ್ಸ್ ಆಫ್ ಇಂಡಿಯಾ ಲಿಮಿಟೆಡ್
77. ಟಿವಿಎಸ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
78. ಉಷಾ ಬೆಲ್ಟ್ರಾನ್ ಲಿಮಿಟೆಡ್
79. ಯುನಿಟೆಕ್ ಲಿಮಿಟೆಡ್
80. ವಿದೇಶ್ ಸಂಚಾರ್ ನಿಗಮ್ ಲಿಮಿಟೆಡ್
81. ವಿಸ್ಟನ್ ಆಟೋಮೋಟಿವ್ ಸಿಸ್ಟಮ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
82. ವಿಸ್ಟನ್ ಪವರ್ ಟ್ರೇನ್ ಕಂಟ್ರೋಲ್ ಸಿಸ್ಟಮ್ (ಇ) ಲಿಮಿಟೆಡ್
83. ವ್ಹೀಲ್ಸ್ ಇಂಡಿಯಾ ಲಿಮಿಟೆಡ್
84. ವಿಪ್ರೋ ಲಿಮಿಟೆಡ್

ಸರ್ಕಾರಿ ಇಲಾಖೆಗಳು (ಕೇಂದ್ರ)

1. ರಕ್ಷಣಾ ಲೆಕ್ಕ ಪತ್ರಗಳ ನಿಯಂತ್ರಕರು (ನೌಕಾದಳ)
2. ಸಮಾಜ ಕಲ್ಯಾಣ ಇಲಾಖೆ (ನವ ದೆಹಲಿ)
3. ಆದಾಯ ತೆರಿಗೆ ಇಲಾಖೆ
4. ದಕ್ಷಿಣ ಕೇಂದ್ರ ರೈಲ್ವೆ

ಸರ್ಕಾರಿ ಇಲಾಖೆಗಳು (ರಾಜ್ಯ)

1. ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಮಿಳುನಾಡು ಸರ್ಕಾರ)
2. ಸಣ್ಣ ಉಳಿತಾಯಗಳ ನಿರ್ದೇಶನಾಲಯ (ತಮಿಳುನಾಡು ಸರ್ಕಾರ)
3. ಸಣ್ಣ ಉಳಿತಾಯಗಳ ನಿರ್ದೇಶನಾಲಯ (ಮಹಾರಾಷ್ಟ್ರ ಸರ್ಕಾರ)
4. ಖಜಾನೆ ಮತ್ತು ಲೆಕ್ಕಗಳ ನಿರ್ದೇಶನಾಲಯ (ತಮಿಳುನಾಡು ಸರ್ಕಾರ)
5. ಪಾವತಿ ಮತ್ತು ಲೆಕ್ಕಪತ್ರಗಳ ಕಚೇರಿ, ಸಚಿವಾಲಯ (ಆಂಧ್ರಪ್ರದೇಶ), ಹೈದರಾಬಾದ್
6. ಪಶ್ಚಿಮ ಬಂಗಾಳ ಗೃಹ ಮಂಡಳಿ

ಇತರೆ ಸಂಸ್ಥೆಗಳು

1. ರಾಷ್ಟ್ರೀಯ ಭದ್ರತೆಗಳ ಡೆಪಾಸಿಟರಿ ನಿಯಮಿತ
2. ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ (ಡೆಪಾಸಿಟರಿ ಸೇವೆಗಳು)
3. ಭಾರತೀಯ ಸ್ಟಾಕ್ ಹೋಲ್ಡಿಂಗ್ ನಿಗಮ ನಿಯಮಿತ

ಇಸಿಎಸ್ (ವಿದ್ಯುನ್ಮಾನ ತೀರುವೆ ಸೇವೆ – ಖರ್ಚು ತೀರುವಳಿ)

ವಿದ್ಯುನ್ಮಾನ ತೀರುವಳಿ ಸೇವೆಯ ಕುರಿತು ಆಗಾಗ ಕೇಳಲಾಗುವ ಪ್ರಶ್ನೆಗಳು

1. ವಿದ್ಯುನ್ಮಾನ ತೀರುವಳಿ ಸೇವೆ (ಖರ್ಚು) ಎಂದರೇನು?

ಭಾರತೀಯ ರಿಸರ್ವ್ ಬ್ಯಾಂಕು, ಕಾಗದ ಮೂಲಕವಾದ ವ್ಯವಹಾರಗಳನ್ನು ಮಿತಗೊಳಿಸಲು ಹಾಗೂ ಗ್ರಾಹಕ ತೃಪ್ತಿಯನ್ನು ಹೆಚ್ಚಿಸಲು ಹಾಗೂ ನಿಯತ ಕಾಲದ ಮತ್ತು ಪುನರಾವರ್ತಕ ಪಾವತಿಗಳಿಗೆ ತ್ವರಿತ ಗತಿಯ ವಿಧಾನವನ್ನು ಕಲ್ಪಿಸಲು ಗ್ರಾಹಕ ಖಾತೆಗಳಿಗೆ (ಯುಕ್ತವಾಗಿ ಅಧಿಕೃತವಾದ) ನೇರ ಖರ್ಚು ಹಾಕುವ ಮೂಲಕ ವಿದ್ಯುನ್ಮಾನ ತೀರುವಳಿ ಸೇವೆ (ಖರ್ಚು) ಯೋಜನೆಯನ್ನು ಆರಂಭಿಸಿದೆ. ವಿದ್ಯುನ್ಮಾನ ತೀರುವಳಿ ಸೇವೆಯಲ್ಲಿ (ಖರ್ಚು) 'ಬಹು ಸಂಖ್ಯೆಯ ಖರ್ಚು ಹಾಗೂ ಒಂದು ಜಮೆ' ಎಂಬ ಅಂಶವಿದ್ದು, ಇದರಡಿ ಉಪಯುಕ್ತ ಸೇವೆ ಒದಗಿಸುವವರಿಗೆ ಪಾವತಿ ಮಾಡಲಾಗುವ ವಿದ್ಯುಚ್ಛಕ್ತಿ ಬಿಲ್ಲುಗಳು, ದೂರವಾಣಿ ಬಿಲ್ಲುಗಳು, ಸಾಲ ಕಂತುಗಳು, ವಿಮಾ ಕಂತು, ಕ್ಲಬ್–ಶಿಲ್ಕುಗಳು ಇತ್ಯಾದಿಗಳನ್ನು ಖರ್ಚು ಹಾಕಲಾಗುತ್ತದೆ.

2. ಈಗಿರುವ ವ್ಯವಸ್ಥೆ ಯಾವುದು? ಹಾಗೂ ಅದರ ಅಡಚಣೆಗಳೇನು?

ಈಗಿರುವ ವ್ಯವಸ್ಥೆ ಪ್ರಕಾರ ವಿದ್ಯುಚ್ಛಕ್ತಿ ಬಿಲ್ಲುಗಳು ಹಾಗೂ ದೂರವಾಣಿ ಬಿಲ್ಲುಗಳಿಗೆ ಪಾವತಿ ಮಾಡಲು ಗ್ರಾಹಕರು/ಚಂದಾದಾರರು ಪಾವತಿ ಕೇಂದ್ರಗಳು/ಗೊತ್ತುಪಡಿಸಲಾದ ಬ್ಯಾಂಕುಗಳಿಗೆ ಹೋಗಬೇಕಾಗುತ್ತದೆ ಹಾಗೂ ಬಿಲ್ಲುಗಳು/ಬಾಕಿಗಳನ್ನು ಪಾವತಿಸಲು ಉದ್ದದ ಸಾಲುಗಳಲ್ಲಿ ನಿಲ್ಲಬೇಕು. ಹೊಸ ವ್ಯವಸ್ಥೆಯಲ್ಲಿ ಯಾವುದೇ ನಗದು ವ್ಯವಹಾರ ಅಥವಾ ಚೆಕ್ ಮೂಲಕವಾದ ಪಾವತಿ ಇರುವುದಿಲ್ಲ.

3. ವಿದ್ಯುನ್ಮಾನ ತೀರುವಳಿ ಸೇವೆಯು ಹೇಗೆ ಕಾರ್ಯನಿರ್ವಹಿಸುತ್ತದೆ?

- ವಿದ್ಯುಚ್ಛಕ್ತಿ ಬಿಲ್ಲುಗಳು/ದೂರವಾಣಿ ಬಿಲ್ಲುಗಳು/ಸಾಲದ ಕಂತುಗಳ ನಿಯತಕಾಲದ/ಪುನರಾವರ್ತಕ ಪಾವತಿಗಳನ್ನು ಸ್ವೀಕರಿಸುವ ಉಪಯುಕ್ತತಾ ಕಂಪನಿಗಳು, ಬ್ಯಾಂಕುಗಳು/ಸಂಸ್ಥೆಗಳು ತಮ್ಮ ಗ್ರಾಹಕರಿಂದ/ವಂತಿಗೆದಾರರಿಂದ ಬ್ಯಾಂಕುಗಳಲ್ಲಿನ ಅವರ ಖಾತೆಗೆ ನೇರ ಖರ್ಚು ಹಾಕುವ ಮೂಲಕ ಅವರಿಂದ ಬರಬೇಕಾದ ಮೊತ್ತದ ಪಾವತಿಯಾಗುವುದಕ್ಕಾಗಿ ಪ್ರಾಥಮಿಕವಾಗಿ ಅವರಿಂದ ಆದೇಶಗಳನ್ನು ಸಂಗ್ರಹಿಸುತ್ತವೆ. ಆದೇಶಗಳು, ಸಂಬಂಧಪಟ್ಟ ಬ್ಯಾಂಕುಗಳಿಂದ ಯುಕ್ತವಾಗಿ ಪ್ರಮಾಣೀಕೃತವಾಗಿದ್ದು ಅದರಲ್ಲಿ ಹೆಸರು, ಖಾತೆ ಸಂಖ್ಯೆ, ಬ್ಯಾಂಕು/ಶಾಖೆಯ ಹೆಸರು ಇತ್ಯಾದಿ ವಿವರಗಳಿರುತ್ತವೆ.

- ಆದೇಶಗಳಲ್ಲಿ ಒದಗಿಸಲಾದ ವಿವರಗಳ ಆಧಾರದ ಮೇಲೆ, ಬಳಕೆದಾರ ಕಂಪನಿಯು, ವಿದ್ಯುನ್ಮಾನ ಮಾಧ್ಯಮದಲ್ಲಿ ವ್ಯವಹಾರದ ದತ್ತಾಂಶವನ್ನು ಸಿದ್ಧಪಡಿಸಿ ಹಾಗೆ ಅಡಕಗೊಂಡ ದತ್ತಾಂಶವನ್ನು ತನ್ನ ಪ್ರಾಯೋಜಕ ಬ್ಯಾಂಕಿನ ಮೂಲಕ ಸ್ಥಳೀಯ ತೀರುವೆ ಮನೆಗೆ ಒಪ್ಪಿಸುತ್ತದೆ.

- ಅಂಕಿಅಂಶಗಳು ಯುಕ್ತವಾಗಿ ಸಿಂಧುಗೊಂಡ ತರುವಾಯ, ಸ್ಥಳೀಯ ತೀರುವಳಿ ಕೇಂದ್ರವು ಅದನ್ನು ಪ್ರಕ್ರಿಯೆಗೆ ಒಳಪಡಿಸಿ ಅಂತರ ಬ್ಯಾಂಕು ಇತ್ಯರ್ಥವನ್ನು ಲೆಕ್ಕ ಹಾಕಿ ಬ್ಯಾಂಕುವಾರು/ಶಾಖಾವಾರು ವರದಿಗಳನ್ನು (ಹಾರ್ಡ್‌ಕಾಪಿ) ಸಿದ್ಧಪಡಿಸುತ್ತದೆ.

- ಎನ್‌ಸಿಸಿಯು, ತೀರುವಳಿ ಕೇಂದ್ರದಲ್ಲಿರುವ ಗಮ್ಯ ಬ್ಯಾಂಕುಗಳ ಖಾತೆಗೆ ಖರ್ಚು ಹಾಕಿ ಅದೇ ವೇಳೆಯಲ್ಲಿ ಪ್ರಾಯೋಜಕ ಬ್ಯಾಂಕುಗಳ ಖಾತೆಗೆ ಸಂಚಿತ ಜಮೆ ನೀಡಿ ಗಮ್ಯ ಬ್ಯಾಂಕುಗಳ ಸೇವಾ ಶಾಖೆಗಳಿಗೆ ಬ್ಯಾಂಕುವಾರು ಮತ್ತು ಶಾಖಾವಾರು ವರದಿಗಳನ್ನು ನೀಡುತ್ತದೆ.

೧೦ ಸೂಚಿಸಲಾದ ಮೊತ್ತವನ್ನು ಗ್ರಾಹಕರ ಖಾತೆಗೆ ಖರ್ಚು ಹಾಕುವುದಕ್ಕಾಗಿ ಸೇವಾ–ಶಾಖೆಗಳು, ಶಾಖಾವಾರು ವರದಿಗಳನ್ನು ಸಂಬಂಧಪಟ್ಟ ಶಾಖೆಗಳಿಗೆ ಕಳುಹಿಸುತ್ತದೆ.

4. ವಿದ್ಯುನ್ಮಾನ ತೀರುವಳಿ ಸೇವೆಯಿಂದಾಗುವ (ಖರ್ಚು) ಪ್ರಯೋಜನಗಳೇನು?

- ಕಂಪನಿಗಳ ಬಿಲ್ಲುಗಳಿಗೆ ತ್ವರಿತ ಹಣ ಪಾವತಿ. ಸಂಗ್ರಹಣೆ ಹಾಗೂ ನಗದಿನ ಉತ್ತಮ ನಿರ್ವಹಣೆ.
- ಗ್ರಾಹಕರು ಪಾವತಿ ಕೇಂದ್ರ/ಬ್ಯಾಂಕುಗಳಿಗೆ ಹೋಗಿ ಪಾವತಿಸಲು ಉದ್ದ ಸಾಲಿನಲ್ಲಿ ನಿಲ್ಲುವ ಅನಿವಾರ್ಯವನ್ನು ತಪ್ಪಿಸುತ್ತದೆ.
- ಗ್ರಾಹಕರು ಒಮ್ಮೆ ನೀಡುವ ಆದೇಶದಿಂದ ಖಾತೆಗೆ ತನ್ನಿಂದತಾನೇ ಖರ್ಚು ಬೀಳುವ ವ್ಯವಸ್ಥೆಯಿಂದ ಪ್ರಕ್ರಿಯೆಯಲ್ಲಾಗುವ ವಿಳಂಬ ನಿವಾರಣೆಯಾಗುತ್ತದೆ.

5. ಪ್ರಸ್ತುತ ಯೋಜನೆಯ ವ್ಯಾಪ್ತಿಯೇನು ?

ಈ ಯೋಜನೆಯು, ಎಲ್ಲ ಭಾರತೀಯ ರಿಸರ್ವ್ ಬ್ಯಾಂಕು ಕೇಂದ್ರಗಳಲ್ಲಿ ಲಭ್ಯವಿದೆ. ಪ್ರಸ್ತುತ ವಿದ್ಯುನ್ಮಾನ ತೀರುವಳಿ ಸೇವೆ (ಖರ್ಚು) ಯು, 43 ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅವುಗಳ ಪೈಕಿ 15 ಕೇಂದ್ರಗಳನ್ನು ಭಾರತೀಯ ರಿಸರ್ವ್ ಬ್ಯಾಂಕು ನಿರ್ವಹಿಸುತ್ತಿದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ನಿರ್ವಹಣೆ*		ಭಾರತೀಯ ಸ್ಟೇಟ್ ಬ್ಯಾಂಕ್‌ನಿಂದ ನಿರ್ವಹಣೆ		
ಕ್ರಮ ಸಂ	ಕೇಂದ್ರದ ಹೆಸರು	ಕ್ರಮ ಸಂ.	ಕೇಂದ್ರದ ಹೆಸರು	ಷರಾಗಳು
1.	ಅಹಮದಾಬಾದ್	1.	ಬರೋಡಾ	
2.	ಬೆಂಗಳೂರು	2.	ಡೆಹ್ರಾಡೂನ್	
3.	ಭುವನೇಶ್ವರ	3.	ನಾಸಿಕ್	
4.	ಕೋಲ್ಕತ್ತಾ	4.	ಪಣಜಿ	
5.	ಚಂಡೀಗಢ್	5.	ಸೂರತ್	
6.	ಚೆನ್ನೈ	6.	ತಿರುಚಿ	
7.	ಗುವಾಹತಿ	7.	ತಿರುಚೂರು	
8.	ಹೈದರಾಬಾದ್		ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ ನಿರ್ವಹಣೆ	
9.	ಜೈಪುರ	1.	ಆಗ್ರಾ	
10.	ಕಾನ್‌ಪುರ	2.	ಅಲಹಾಬಾದ್	
11.	ಮುಂಬೈ	3.	ಜಲಂಧರ್	
12.	ನಾಗಪುರ	4.	ಲಕ್ನೋ	
13.	ನವ ದೆಹಲಿ	5.	ಲೂಧಿಯಾನ	
14.	ಪಾಟ್ನಾ	6.	ವಾರಣಾಸಿ	
15.	ತಿರು'ಪುರಂ	7.	ಕೊಲ್ಹಾಪುರ	
ಸ್ಟೇಟ್ ಬ್ಯಾಂಕ್ ಆಫ್ ಇಂದೋರ್‌ನಿಂದ ನಿರ್ವಹಣೆ		8.	ಔರಂಗಾಬಾದ್	
1.	ಇಂದೋರ್	9.	ಮೈಸೂರು	
ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಿಂದ ನಿರ್ವಹಣೆ		10.	ಈರೋಡು	
1.	ಪುಣೆ	ಕಾರ್ಪೊರೇಷನ್ ಬ್ಯಾಂಕ್‌ನಿಂದ ನಿರ್ವಹಣೆ		
2.	ಸೇಲಂ	1.	ಮಂಗಳೂರು	
ಆಂಧ್ರಾ ಬ್ಯಾಂಕ್‌ನಿಂದ ನಿರ್ವಹಣೆ		ಬ್ಯಾಂಕ್ ಆಫ್ ಬರೋಡಾದಿಂದ ನಿರ್ವಹಣೆ		
1.	ವಿಶಾಖಾಪಟ್ಟಣ	1.	ಕೊಯಂಬತ್ತೂರು	
		2.	ರಾಜ್‌ಕೋಟ್	

ಸ್ಟೇಟ್ ಬ್ಯಾಂಕ್ ಆಫ್ ತಿರುವಾಂಕೂರುದಿಂದ ನಿರ್ವಹಣೆ			**ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ನಿರ್ವಹಣೆ**	
1.	ಕೊಚ್ಚಿನ್/ಎರ್ನಾಕುಲಂ	1.	ಭೋಪಾಲ್	
	ಕೆನರಾ ಬ್ಯಾಂಕ್‌ನಿಂದ ನಿರ್ವಹಣೆ		**ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್‌ನಿಂದ ನಿರ್ವಹಣೆ**	
1.	ಮಧುರೈ	1.	ಅಮೃತಸರ	

6. ಈ ಯೋಜನೆಯ ಅಡಿಯಲ್ಲಿ ವೈಯಕ್ತಿಕ ವ್ಯವಹಾರಕ್ಕೆ ಮಿತಿ ವಿಧಿಸಲಾಗಿದೆಯೇ?

ವೈಯಕ್ತಿಕ ವ್ಯವಹಾರಗಳಿಗೆ ಯಾವುದೇ ಮೌಲ್ಯ ಮಿತಿಗಳಿಲ್ಲ.

7. ಸಂಸ್ಕರಣಾ ಶುಲ್ಕಗಳು/ಸೇವಾ ಶುಲ್ಕಗಳು

ಭಾರತೀಯ ರಿಸರ್ವ್ ಬ್ಯಾಂಕು ಮಾರ್ಚ್ 31, 2007ರ ವರೆಗೆ ಯಾವುದೇ ಮೊತ್ತವನ್ನೊಳಗೊಂಡ ವೈಯಕ್ತಿಕ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಕ್ರಿಯಾ ಶುಲ್ಕಗಳನ್ನು ಮನ್ನಾ ಮಾಡಿದೆ. ಆದರೆ ಬ್ಯಾಂಕುಗಳು ವಿಧಿಸುವ ಸೇವಾ ಶುಲ್ಕಗಳನ್ನು ಕುರಿತ ನಿರ್ಧಾರವನ್ನು ಬ್ಯಾಂಕುಗಳ ವಿವೇಚನೆಗೆ ಬಿಡಲಾಗಿದೆ.

8. ವಿದ್ಯುನ್ಮಾನ ತೀರುವಳಿ ಸೇವಾ (ಖರ್ಚು) ಯೋಜನೆಯನ್ನು ಯಾವ ಮಾದರಿಯ ಸಂಸ್ಥೆಗಳು ಬಳಸುತ್ತಿವೆ?

ಎಂ.ಟಿ.ಎನ್.ಎಲ್, ದೂರವಾಣಿ/ಮೊಬೈಲ್ ಕಂಪನಿಗಳು, ಟೆಲಿಕಾಂ ಇಲಾಖೆಗಳು, ರಾಜ್ಯ ವಿದ್ಯುಚ್ಛಕ್ತಿ ಮಂಡಲಿಗಳು, ಬ್ಯಾಂಕುಗಳು (ಕ್ರೆಡಿಟ್ ಕಾರ್ಡ್‌ಗಳ ಮೇಲಿನ ಬಾಕಿ ವಸೂಲಿಗೆ) ಜೀವ ವಿಮಾ ನಿಗಮ, ಗೃಹ ನಿರ್ಮಾಣಕ್ಕೆ ಹಣಕಾಸು ನೀಡುವ ಕಂಪನಿಗಳು, ಮಧ್ಯವರ್ತಿಗಳು ಹಾಗೂ ಕ್ಲಬ್ಬುಗಳು ಇತ್ಯಾದಿಗಳಂಥ ಉಪಯುಕ್ತ ಸೇವೆ ಒದಗಿಸುವವರು.

ವಿದ್ಯುನ್ಮಾನ ತೀರುವಳಿ ಸೇವೆ ಖರ್ಚು–ಬಳಕೆದಾರ ಸಂಸ್ಥೆಗಳು (31ನೇ ಮಾರ್ಚ್ 2001)

ಕ್ರ.ಸಂ.	ಬ್ಯಾಂಕುಗಳು
1.	ಎಬಿಎನ್ ಆಮ್ರೋ ಬ್ಯಾಂಕ್
2.	ಅಮೆರಿಕನ್ ಎಕ್ಸ್‌ಪ್ರೆಸ್ ಬ್ಯಾಂಕ್ ಲಿಮಿಟೆಡ್
3.	ಅಮೆಕ್ಸ್ ಕಾರ್ಡ್‌ಗಳು
4.	ಸಿಟಿ ಬ್ಯಾಂಕ್ – ಕ್ರೆಡಿಟ್ ಕಾರ್ಡ್‌ಗಳು
5.	ಸಿಟಿ ಬ್ಯಾಂಕ್ – ಪರೋಕ್ಷ ಕಾರ್ಯಾಚರಣೆಗಳು
6.	ಎಚ್‌ಎಸ್‌ಸಿಬಿ ಲಿಮಿಟೆಡ್
7.	ಐಸಿಐಸಿಐ ಬ್ಯಾಂಕ್ ಲಿಮಿಟೆಡ್
8.	ಐಸಿಐಸಿಐ ಬಿಲ್ ಜಂಕ್ಷನ್
9.	ಭಾರತೀಯ ಸ್ಟೇಟ್ ಬ್ಯಾಂಕ್ ಕಾರ್ಡ್‌ಗಳು
10.	ಸ್ಟಾಂಡರ್ಡ್ ಚಾರ್ಟೆಡ್ ಬ್ಯಾಂಕ್
11.	ಸ್ಟಾಂಡರ್ಡ್ ಚಾರ್ಡರ್ಡ್ ಡಿಪೊ ಸರ್ವೀಸ್

ಕಾರ್ಪೊರೇಟ್ ಸಂಸ್ಥೆಗಳು

1. ಅಭಿಪ್ರಾ ಕ್ಯಾಪಿಟಲ್ಸ್
2. ಅಲಂಕಿತ್ ಅಸೈನ್‌ಮೆಂಟ್ಸ್ ಲಿ.
3. ಆಂಖ್ನೆಟ್ ಇನ್‌ಫರ್ಮೇಷನ್ಸ್ ಪ್ರೈ ಲಿ.
4. ಎಒ (ಪಶ್ಚಿಮ) ಬಿಎಸ್‌ಎನ್‌ಎಲ್, ಅಹ್ಮದಾಬಾದ್
5. ಭಾರತಿ ಮೊಬೈಲ್ ಲಿಮಿಟೆಡ್
6. ಬಿಲ್ ಜಂಕ್ಷನ್ ಪೇಮೆಂಟ್ಸ್ ಲಿಮಿಟೆಡ್
7. ಬಿಪಿಎಲ್ ಮೊಬೈಲ್ ಕಾಂ ಲಿಮಿಟೆಡ್
8. ಬಿಎಸ್‌ಇಎಸ್ ಲಿಮಿಟೆಡ್
9. ಬಿಎಸ್‌ಎನ್‌ಎಲ್, ಬೆಂಗಳೂರು
10. ಬಿಎಸ್‌ಎನ್‌ಎಲ್, ಚಂಡೀಗಢ್
11. ಬಿಎಸ್‌ಎನ್‌ಎಲ್, ಕಾನ್ಪುರ
12. ಬಿಎಸ್‌ಎನ್‌ಎಲ್, ಭುವನೇಶ್ವರ
13. ಬಿಎಸ್‌ಎನ್‌ಎಲ್, ಚೆನ್ನೈ
14. ಬಿಎಸ್‌ಎನ್‌ಎಲ್, ಕೋಲ್ಕತ್ತಾ
15. ಬಿಎಸ್‌ಎನ್‌ಎಲ್, ನಾಗಪುರ
16. ಬಿಎಸ್‌ಎನ್‌ಎಲ್, ಹೈದರಾಬಾದ್
17. ಹೆಕ್ಸಾಕಾಂ ಇಂಡಿಯಾ ಲಿಮಿಟೆಡ್
18. ಹಚ್ಚಿಸನ್ ಮ್ಯಾಕ್ಸ್ ಟೆಲಿಕಾಂ ಲಿಮಿಟೆಡ್
19. ಇಂಟ್ರೆಕ್ಸ್ ಇಂಡಿಯಾ ಲಿಮಿಟೆಡ್
20. ಕಲ್ಯಾಣ್ ಟೆಲಿಕಾಂ, ಬಿಎಸ್‌ಎನ್‌ಎಲ್, ಕಲ್ಯಾಣ್
21. ಕರ್ನಾಟಕ ಪವರ್ ಟ್ರಾನ್ಸ್‌ಪೋರ್ಟ್ ಲಿಮಿಟೆಡ್
22. ಮನ್‌ಸುಖ್ ಸೆಕ್ಯೂರಿಟೀಸ್ ಅಂಡ್ ಫೈನಾನ್ಸ್ ಲಿಮಿಟೆಡ್
23. ಎಂಟಿಎನ್‌ಎಲ್, ದೆಹಲಿ
24. ಎಂಟಿಎನ್‌ಎಲ್, ಮುಂಬಯಿ
25. ಎಸ್.ಎಸ್. ಕಾಂತಿಲಾಲ್ ಈಶ್ವರ್‌ಲಾಲ್ ಸೆಕ್ಯೂರಿಟೀಸ್ ಲಿಮಿಟೆಡ್
26. ಸ್ವಾನ್ ಸೆಕ್ಯೂರಿಟೀಸ್ ಪ್ರೈ. ಲಿಮಿಟೆಡ್
27. ಸ್ಟರ್ಲಿಂಗ್ ಸೆಲ್ಯುಲಾರ್
28. ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್
29. ಸೂಪರ್ ಸೇವಾ ಸರ್ವೀಸಸ್ ಪ್ರೈ. ಲಿಮಿಟೆಡ್
30. ಟಾಟಾ ಸೆಲ್ಯುಲಾರ್ ಲಿಮಿಟೆಡ್
31. ಟೈಮ್ಸ್ ಆನ್ ಲೈನ್ ಮನಿ ಲಿಮಿಟೆಡ್ (ಟಿಓಎಂಎಲ್)

ಹಣಕಾಸು ಸಂಸ್ಥೆಗಳು

1. ಐಸಿಐಸಿಐ ಲಿಮಿಟೆಡ್
2. ಐಸಿಐಸಿಐ ಲಿಮಿಟೆಡ್–ಕಸ್ಟೋಡಿಯಲ್ ಸೇವೆಗಳು
3. ಐಸಿಐಸಿಐ ಪ್ರುಡೆನ್ಷಿಯಲ್ ಲೈಫ್ ಇನ್ಸೂರೆನ್ಸ್ ಕಾರ್ಪೊರೇಷನ್ ಲಿಮಿಟೆಡ್
4. ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಒಟ್ಟು = 46